ಕೆಲಸ ನಿರ್ವಹಿಸುವುದರಿಂದ ಹೆಚ್ಚು ಹೊರೆಯಾಗದು. ಅಂದುಕೊಂಡಿದ್ದನ್ನೆಲ್ಲ ಸರಾಗವಾಗಿ ಮಾಡಿ ಮುಗಿಸಬಹುದು' ಎಂದು ವಿವರಿಸುತ್ತಾರೆ.

'ಪ್ರತಿ ಸನ್ನಿವೇಶಕ್ಕೂ ಹಾಸ್ಯದ ಆಯಾಮವೊಂದು ಇದ್ದೇ ಇರುತ್ತದೆ. ಹಾಸ್ಯದ ಕ್ಯಾನ್ವಾಸ್ ಕೂಡ ದೊಡ್ಡದೇ. ಆದರೆ, ಅದನ್ನು ಗ್ರಹಿಸುವ ಮನಸ್ಸು ಮಾಡಬೇಕಷ್ಟೆ. ಸಾಮಾನ್ಯವಾಗಿ ಸ್ಟ್ಯಾಂಡ್ ಅಪ್ ಕಾಮಿಡಿಯಲ್ಲಿಯೂ ವೈದ್ಯನಾಗಿ ಅನುಭವಿಸುವ ಸವಾಲುಗಳನ್ನು ತಿಳಿ ಹಾಸ್ಯದ ಮೂಲಕ ಜನರ ಮುಂದಿಡುತ್ತೇನೆ' ಎನ್ನುವ 35ರ ಹರೆಯದ ಚತುರ್ವೇದಿ ಬನ್ನೇರುಘಟ್ಟ ಫೋರ್ಟಿಸ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ತಂದೆ ನಿಮ್ಹಾನ್ಸ್‌ನಲ್ಲಿ ಮನೋವೈದ್ಯ, ತಾಯಿ ನಿವೃತ್ತ ಶಿಕ್ಷಕಿ. 'ಅಪ್ಪನಿಗೂ ಬಣ್ಣವೆಂದರೆ ಬಲು ಇಷ್ಟ. ಅವರು ಹಲವು ನಾಟಕಗಳಲ್ಲಿ ಅಭಿನಯಿಸಿದ್ದವರೇ. ಆ ಆಸಕ್ತಿಯನ್ನು ನನ್ನಲ್ಲಿ ಕಂಡು ಪೋಷಿಸುತ್ತಾ ಬಂದರು. ಇದೇ ನನ್ನನ್ನು ಇಲ್ಲಿಗೆ ತಂದು ನಿಲ್ಲಿಸಿದೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

## ಪುಸ್ತಕವೇ ವೆಬ್‌ಸಿರೀಸ್ ಆಯ್ತು!

'ವೈದ್ಯಕೀಯ ಉಪಕರಣಗಳನ್ನು ಕಂಡುಹಿಡಿಯುವಾಗ ಆದ ವೈಫಲ್ಯಗಳನ್ನು ಅಕ್ಷರರೂಪಕ್ಕಿಳಿಸಿದ್ದೆ. ಇದು ವೈದ್ಯ ಮತ್ತು ತಂತ್ರಜ್ಞಾನ ಲೋಕದ ಹಲವು ವಿಚಾರಗಳನ್ನು ಅನಾವರಣಗೊಳಿಸಿತ್ತು. ವೈದ್ಯಕೀಯ ವಲಯದಲ್ಲಿಯೂ ಒಳ್ಳೆಯ ಹೆಸರು ತಂದುಕೊಟ್ಟಿತ್ತು. ಇದನ್ನು ಓದಿದ ಡಾ. ಶ್ವೇತಾ ಮಲ್ಲಿಕ್ ಎಂಬುವವರು ವೆಬ್ ಸೀರಿಸ್ ನಿರ್ಮಾಣ ಸಂಸ್ಥೆಯನ್ನು ಸಂಪರ್ಕಿಸಿ, ನನ್ನನ್ನೇ ಮುಖ್ಯ ಪಾತ್ರವಾಗುವಂತೆ ಕೇಳಿಕೊಂಡರು. ಅದೇ 'ಸ್ಟಾರ್ಟಿಂಗ್ ಟ್ರಬಲ್' ಎಂಬ ವೆಬ್ ಸೀರಿಸ್ ಆಯಿತು' ಎಂದು ಪುಸ್ತಕ ವೆಬ್ ಸಿರೀಸ್ ಆದ ಕತೆಯನ್ನು ಹೇಳಿಕೊಂಡರು.

ಭಾರತೀಯರು ವೈದ್ಯರು ಸಂಶೋಧನೆಯ ಹಾದಿಯತ್ತ ಹೊರಳಬೇಕಿದೆ. ಈ ಕ್ಷೇತ್ರದಲ್ಲಿರುವ ಸಮಸ್ಯೆಗಳೇನು ಎಂಬುದನ್ನು ವೈದ್ಯರಷ್ಟು ಚೆನ್ನಾಗಿ ಇತರರು ತಿಳಿಯಲು ಸಾಧ್ಯವಿಲ್ಲ. ಹಾಗಾಗಿ ಸಣ್ಣದಿರಲಿ, ದೊಡ್ಡದಿರಲಿ ಸಂಶೋಧನೆಯೆಂಬುದು ನಿರಂತರವಾಗಿ ಚಾಲ್ತಿಯಲ್ಲಿದ್ದರೆ ವೈದ್ಯಕೀಯ ಸೇವೆಯನ್ನು ಇನ್ನಷ್ಟು ಸುಲಭವಾಗಿ ಜನರ ಬಳಿ ಕೊಂಡೊಯ್ಯಬಹುದು ಎಂಬ ಮಾತಿನಲ್ಲಿ ಜಗದೀಶ್ ಅವರಿಗೆ ನಂಬಿಕೆ ಹೆಚ್ಚು.



'ಸಂಶೋಧನೆಯ ಹಿಂದೆ ಬಿದ್ದರೆ, ರೋಗಿಗಳ ಆರೈಕೆ ಅಸಾಧ್ಯ ಎಂದು ಭಾವಿಸುವವರೇ ಹೆಚ್ಚು. ಎರಡಕ್ಕೂ ಸಮಯ ಕೊಟ್ಟು, ಗಮನವಿಟ್ಟು ಮಾಡಲು ಮನಸ್ಸು ಮಾಡಬೇಕಷ್ಟೆ. ಈವರೆಗೆ 18 ವೈದ್ಯಕೀಯ ಸಲಕರಣೆಗಳ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದೇನೆ. ಅದರಲ್ಲಿ ಒಂಬತ್ತು ಉಪಕರಣಗಳನ್ನು ಮಾರುಕಟ್ಟೆಗೆ ತರುವಲ್ಲಿ ಯಶಸ್ವಿಯಾಗಿದ್ದೇನೆ' ಎನ್ನುವಾಗ ಅವರ ಮುಖದಲ್ಲಿ ಸಾರ್ಥಕತೆಯ ಭಾವ ಹಾದುಹೋಗುತ್ತದೆ.

## ಉಪಕರಣಗಳ ಸ್ಯಾಂಪಲ್

ಅವರು ಕಂಡುಹಿಡಿದಿರುವ ಒಂಬತ್ತು ಉಪಕರಣಗಳಲ್ಲಿ ಎರಡು ಹೀಗಿವೆ. ಸೈನಸ್ ಸಮಸ್ಯೆ ಇರುವವರಿಗೆ ಬಲೂನು ಬಳಸಿ ಒಂದು ಉಪಕರಣ ತಯಾರಿಸಲಾಗಿದೆ. ಅದನ್ನು ಸೈನೋಫಿಯಾ ಎಂದು ಕರೆಯಲಾಗುತ್ತದೆ. ಅದನ್ನು ಬಳಸಿದರೆ ಸರ್ಜರಿ ಬೇಕಾಗಿಲ್ಲ.

ಕಟ್ಟಡ ಕಾಮಗಾರಿ ಮಾಡುವ ಕೂಲಿಕಾರ್ಮಿಕರ ಮಕ್ಕಳು ಅಕಸ್ಮಾತ್ ಆಗಿ ಮೂಗಿನಲ್ಲಿ ಕಲ್ಲು, ಹತ್ತಿ ಬೀಜ ಹಾಕಿಕೊಂಡ ಪ್ರಕರಣಗಳಿವೆ. ಅವುಗಳನ್ನು ತೆಗೆಯಲು ಶಸ್ತ್ರಚಿಕಿತ್ಸೆಯೇ ಮಾಡಬೇಕಾಗುತ್ತದೆ. ಆದರೆ, 'ನೊಹಿನೊ' ಎನ್ನುವ ಉಪಕರಣ ಕಂಡುಹಿಡಿಯಲಾಗಿದ್ದು, ಅದರ ಮೂಲಕ ಕಲ್ಲನ್ನು ಹೆಚ್ಚಿನ ತೊಂದರೆಯಿಲ್ಲದೆ ತೆಗೆಯಬಹುದು. ಅತಿ ಕಡಿಮೆ ಖರ್ಚಿನಲ್ಲಿ ಈ ಉಪಕರಣಗಳು ರೂಪುಗೊಂಡಿದ್ದರಿಂದ, ಸಾಮಾನ್ಯ ಜನರಿಗೆ ಕಡಿಮೆ ಖರ್ಚಿನಲ್ಲಿ ಲಭ್ಯವಾಗುತ್ತವೆ ಎನ್ನುತ್ತಾರೆ.

ನಿತ್ಯ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಹಲವು ಆ್ಯಪ್‌ಗಳು ಬಿಡುಗಡೆಯಾಗುತ್ತವೆ. ಆದರೆ, ಚಿಕಿತ್ಸೆ ಮಾಡಲು ಸರಿಯಾದ ಉಪಕರಣ ಬೇಕು. ಅದನ್ನು ವೈದ್ಯಲೋಕ ಸಂಶೋಧಿಸಿದರೆ ಹೆಚ್ಚು ಸೂಕ್ತ ಎನ್ನುತ್ತಾರೆ ಅವರು.

ಈವರೆಗೆ 19 ಉಪಕರಣಗಳನ್ನು ಸಂಶೋಧಿಸಲಾಗಿದೆ. ಅದರಲ್ಲಿ 9 ಉಪಕರಣಗಳು ಪ್ರಮಾಣೀಕೃತಗೊಂಡು ಮಾರುಕಟ್ಟೆಯಲ್ಲಿ ಲಭ್ಯವಿದೆ.

## ಮನರಂಜನಾ ಮಾಹಿತಿ ದಾರಿ ಇಷ್ಟ

ಎರಡು ಬಗೆಯ ಜನರಿದ್ದಾರೆ. ವೃತ್ತ ಪತ್ರಿಕೆ, ನಿಯತಕಾಲಿಕೆಗಳನ್ನು ಓದಿ, ಅದರಲ್ಲಿರುವ ಮಾಹಿತಿಯನ್ನು ಅರ್ಥ ಮಾಡಿಕೊಳ್ಳುವವರು. ಇನ್ನೊಂದು ಬಗೆ ಜನರಿಗೆ ಓದುವುದೆಲ್ಲ ಆಗದು. ಅಂಥವರಿಗಾಗಿಯೇ ಮನರಂಜನಾ ಮಾಧ್ಯಮದಲ್ಲಿ ಮಾಹಿತಿ ನೀಡಲಾಗುತ್ತದೆ.

ಕೊರೊನಾ ವೈರಸ್ ಬಗ್ಗೆ ಮಾಹಿತಿ ನೀಡಲು ಒಂದು ವಿಡಿಯೊ ಮಾಡಿದ್ದೇನೆ. ಮಾಸ್ಕ್‌ಗಿಂತಲೂ, ಸದಾ ಕೈ ತೊಳೆಯುವುದು ತುಂಬಾ ಮುಖ್ಯ. ಚಿಕಿತ್ಸೆ ನೀಡಲು ಆಸ್ಪತ್ರೆಗಳ ಕೊರತೆ ಇರುವುದರಿಂದ ಆದಷ್ಟು ಪ್ರತ್ಯೇಕವಾಗಿರಬೇಕು ಎನ್ನುವ ಸಲಹೆ ಅವರದ್ದು.

ಪ್ರತ್ಯೇಕವಾಗಿರುವ ಬಗ್ಗೆಯೂ ರ‍್ಯಾಪ್ ಬಳಸಿ ವಿಡಿಯೊ ಮಾಡಿದ್ದೇನೆ. ಸೋಲಿನ ಕುರಿತು ಪುಸ್ತಕ ಬರೆದಿದ್ದೇನೆ. ನಾನೂ ಶಾಲೆ–ಕಾಲೇಜುಗಳಲ್ಲಿದ್ದಾಗ ಫೇಲಾದವನು. ಅಷ್ಟೇಕೆ, ಸಂಶೋಧನೆಯಲ್ಲಿಯೂ ನಿರಂತರವಾಗಿ ಸೋತು ನಂತರ ಗೆದ್ದವನು. ಹಾಗಾಗಿ ಸೋಲುವುದರ ಬಗ್ಗೆ ಭಯ ಬೇಡ. ಪ್ರಯತ್ನ ಜಾರಿಯಲ್ಲಿರಲಿ ಎನ್ನುತ್ತಾರೆ ಅವರು.

## ಸಂಶೋಧಕರಿಗೆ ಸಾಮಾಜಿಕ ಜಾಲತಾಣ

ಸಂಶೋಧಕರನ್ನೆಲ್ಲ ಒಗ್ಗೂಡಿಸುವ ಸಲುವಾಗಿಯೇ ಸ್ಟಾರ್ಟ್ ಅಪ್ ಕಂಪನಿ **'HiiiH'** ರೂಪಿಸಲಾಗಿದೆ. ಇದು ಸಾಮಾಜಿಕ ಜಾಲತಾಣದಂಥ ವೇದಿಕೆ. ವೈದ್ಯರು, ಎಂಜಿನಿಯರುಗಳು, ವಕೀಲರು, ಹೀಗೆ ನಾನಾ ಕ್ಷೇತ್ರದವರು ತಮ್ಮೊಳಗಿನ ಹೊಸ ಆಲೋಚನೆಗಳನ್ನು, ಚಿಂತನೆಗಳನ್ನು ಹಂಚಿಕೊಳ್ಳಬಹುದು. ಅದು ಕಾರ್ಯರೂಪಕ್ಕೆ ಬರಲು ಈ ಸ್ಟಾರ್ಟ್ ಅಪ್ ಸಹಾಯ ಮಾಡುತ್ತದೆ ಎಂದು ವಿವರಿಸಿದರು.

ಈ ಎಲ್ಲದರ ನಡುವೆಯೂ ನಟಿಸಲು ಸಿದ್ಧವಿದ್ದೀರಾ? ಎಂದರೆ, ಹಸನ್ಮುಖರಾಗುವ ಅವರು, 'ಯಾಕಾಗಬಾರದು? ಗಾಂಧಿನಗರವೇನಾದರೂ ಅವಕಾಶ ಕೊಟ್ಟರೆ ನಟಿಸುತ್ತೇನೆ. ಏನೇ ಮಾಡಿದರೂ ವೃತ್ತಿಪರತೆ ಬಿಡುವುದಿಲ್ಲ' ಎಂದು ಆತ್ಮವಿಶ್ವಾಸದಿಂದ ಹೇಳುತ್ತಾರೆ. ■

